CC 2607-2019
PW-2

ದಿನಾಂಕ- 08-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತ

ಪಾಟೀ ಸವಾಲು ಶ್ರೀ ಅರ್ ಎನ್ ಬಿ ವಕೀಲರಿಂದ:

ನಾನು ಆಟೋ ಮೊಬೈಲ್ಸ್ ಮತ್ತು ಟ್ರ್ಯಾವೆಲ್ ವ್ಯವಹಾರ ಮಾಡುತ್ತೇನೆ ನಾನು 2006 ರಿಂದ ಆಟೋಮೊಬೈಲ್ಸ್ ಉದ್ಯೋಗ ಮಾಡುತ್ತೇನೆ . ನಾನು ನೆಹರೂ ಕಾಲೋನಿ ಹೊಸಪೇಟೆಯಲ್ಲಿ ವಾಸವಿದ್ದೇನೆ ಅಲ್ಲಿ ನಾನು ಹುಟ್ಟಿದಾಗಿನಿಂದಲೂ ವಾಸವಿದ್ದೇನೆ . ಆರೋಪಿ ನನ್ನ ಅಂಗಡಿಗೆ ಬಂದು ಸಾಮಾಗ್ರಿಗಳನ್ನು ಖರೀದಿ ಮಾಡುತ್ತಾನೆ . ಆರೋಪಿ ಲಾರಿಯ ಸಾಮಗ್ರಿಗಳನ್ನು ನಮ್ಮ ಅಗಂಡಿಯಲ್ಲಿ ಖರೀದಿಸುತ್ತಿದ್ದನು ಆರೋಪಿ ನಮ್ಮ ಅಂಗಡಿಯಲ್ಲಿ ಲಾರಿಯ ಸಾಮಾಗ್ರಿಗಳನ್ನು ಖರೀದಿ ಮಾಡುತ್ತಿದ್ದನು ಅಂತ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

ಆರೋಪಿ ಸುಮಾರು 20 ವರ್ಷಗಳಿಂದ ಪಾಂಡುರಂಗ ಕಾಲೋನಿ ಅನಂತಯನಗುಡಿಯಲ್ಲಿ ವಾಸವಿದ್ದಾನೆ ಅಂದರೆ ಸರಿ . ಆರೋಪಿ ವಾಸವಿರುವ ಸ್ಥಳ ಮತ್ತು ನಮ್ಮ ಮನೆ ಸುಮಾರು 6 ಕಿ ಮೀ ಅಂತರ ಇದೆ ಅಂದರೆ ಸರಿ ಆರೋಪಿ ನಮ್ಮ ನೆರೆ ಹೊರೆ ಅಲ್ಲಾ ಅಂದರೆ ಸರಿ . ಆರೋಪಿ ಸುಮಾರು ವರ್ಷಗಳಿಂದ ಬ್ಯಾಂಕಿನಲ್ಲಿ ಕರೆಂಟ್ ಅಕೌಂಟ್ ಖಾತೆ ಹೊಂದಿದ್ದಾರೆ ಅಂದರೆ ನನಗೆ ಗೊತ್ತಿಲ್ಲ . ಆರೋಪಿ ದಿಃ 8-4-2018 ರ ಹಣಕಾಸಿನ ಸಹಾಯ ಕೇಳಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಆರೋಪಿ ಕೂಲಿ ಕಾರ್ಮಿಕರ ಸಂಬಳ ನೀಡಲು ನನ್ನ ಹತ್ತಿರ ಹಣ ಕಾಸಿನ ಸಹಾಯ ಕೇಳಿರುತ್ತಾರೆ . ಆರೋಪಿ ನನ್ನ ಹತ್ತಿರ ರೂ . 25,000 ಹಾಣ ಕಾಸಿನ ಸಹಾಯ ಕೇಳಿರುತ್ತಾನೆ . ಆರೋಪಿ ಗೆ ನನ್ನ ಅಂಗಡಿಯಲ್ಲಿ ಹಣ ನೀಡಿರುತ್ತೇನೆ . ಆರೋಪಿ ಗೆ ನಗದಾಗಿ ಹಣ ನೀಡಿರುತ್ತೇನೆ . ಆರೋಪಿ ಗೆ 100 ಮುಖಬೆಲೆಯ 2 ಬಂಡಲ್ ಮತ್ತು 50 ಮುಖಬೆಲೆಯ 1 ಬಂಡಲ್ ಹಣ ನೀಡಿರುತ್ತೇನೆ . ನೀಡಿದ ಹಣಕ್ಕೆ ಶೇಕಡ 2 ಪರ್ಸೆಂಟ್ ಬಡ್ಡಿ ಕೇಳಿರುತ್ತೇನೆ . ಮನಿ ಲೆನ್‌ಂಡಿಗ್ ಲೈಸೆನ್ಸ್ ಇಲ್ಲಾ ಆರೋಪಿ ಕೈಗಡ ಸಾಲ ಕೇಳಿರುತ್ತಾನೆ ಎಂದು ಸಾಕ್ಷಿ ನುಡಿಯುತ್ತಾರೆ . ಆರೋಪಿ ಗೆ 15-07-

2018 ರಂದು ಹಣ ಮರುಪಾವತಿ ಮಾಡು ಎಂದು ಕೇಳಿರುತ್ತೇನೆ . ಅದೇ ದಿನ ಆರೋಪಿ ಚೆಕ್ಕು ನೀಡಿರುತ್ತಾನೆ . ಖಾಲಿ ಚೆಕ್ಕ ಅನ್ನು ಆರೋಪಿ ಯೇ ಬರಣಿಗೆ ಮಾಡಿ ಕೊಟ್ಟಿರುತ್ತಾನೆ ಆರೋಪಿ ಯೇ ನಿಪಿ 1 ಅನ್ನು ಬರಣಿಗೆ ಮಾಡಿದ್ದಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ . ಆರೋಪಿಗೆ ಇಂಗ್ಲೀಷ ಬರೆಯಲು ಬರುವುದಿಲ್ಲ ಅಂದರೆ ಸರಿಯಲ್ಲ . ಆರೋಪಿ ರೂ. 26,600 ಹಣ ಚೆಕ್ಕಿನಲ್ಲಿ ಬರೆದು ಚೆಕ್ಕ ಅನ್ನು ನೀಡಿರುತ್ತಾನೆ . ಆರೋಪಿ ಅದಿನ ಯಾವುದೇ ಚೆಕ್ಕಿನಲ್ಲಿ ಬರವಣಿಗೆ ಮಾಡದೆ ಯಾವುದೇ ಚೆಕ್ಕ ಅನ್ನು ನನಗೆ ನೀಡಿಲ್ಲ ಅಂದರೆ ಸರಿಯಲ್ಲ .

2013 ರಲ್ಲಿ ನನ್ನ ಟೈಯರ್ ಶಾಪ್ ಬಳ್ಳಾರಿ ಕೈಗಾರಿಕ ರಸ್ತೆಯಲ್ಲಿ ಇತ್ತು ಅಂದರೆ ಸರಿ . ಅದೇ ವರ್ಷದಲ್ಲಿ ಆರೋಪಿ ಟಿಪ್ಪರ್ ಲಾರಿ ಹೊಂದಿದ್ದ ಅಂದರೆ ಸರಿ . ಹೊನ್ನೂರು ಸ್ವಾಮಿ ಕಾರಿಗನೂರು ಇವರು ನನ್ನ ಅಂಗಡಿಯ ಗಿರಾಕಿ . 15-7-2018 ರಂದು ಮೊದಲನೆಯ ಸಲ ನಿಪಿ 1 ಅನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹೋಗಿರುತ್ತೇನೆ . ನನ್ನ ಪಿರ್ಯಾದಿ ಯಲ್ಲಿ ದಿಃ 15-7-2018 ರಂದು ಬ್ಯಾಂಕಿಗೆ ಹೋಗಿರುತ್ತೇನೆ ಎಂದು ಬರೆಸಿದ್ದೇನೆ . ಪ್ರತಿ ವರ್ಷ ನಾನು ಐ ಟಿ ರಿಟರ್ನ್ಸ್ ಸಲ್ಲಿಸುತ್ತೇನೆ . 2019-20 ಅಲ್ಲಿ ಲೋನ್ ಕೊಟ್ಟ ಬಗ್ಗೆ ಐ ಟಿ ರಿಟರ್ನ್ಸ್‌ನಲ್ಲಿ ತಿಳಿಸಿರುತ್ತೇನೆ. ದಿಃ 12-10-2018 ರಂದು ಬ್ಯಾಂಕಿಗೆ ನಾನು ಹೋಗಿಲ್ಲ ಅಂದರೆ ಸರಿಯಲ್ಲ . ಆರೋಪಿ ಮತ್ತು ಬ್ಯಾಂಕಿನ ಅಧಿಕಾರಿಗಳು ಏನೇಲ್ಲಾ ಮೀಟಿಂಗ್ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ . ಬ್ಯಾಂಕಿನ ಅಧಿಕಾರಿಗಳು ಆರೋಪಿ ನನಗೆ ಚೆಕ್ಕು ನೀಡಿಲ್ಲ ಚೆಕ್ಕ ಅನ್ನು ನಾನು ಸೃಷ್ಟಿಸಿ ನೀಡಿರುತ್ತೇನೆ ಅದಕ್ಕೆ ಬ್ಯಾಂಕಿನಲ್ಲಿರುವ ಬೋರ್ಡ ಅನ್ನು ತೋರಿಸಿ ನಾನು ಶಿಕ್ಷೆಗೆ ಒಳಪಡುತ್ತೇನೆ ಎಂದು ಹೇಳಿರುತ್ತಾರೆ . ಬ್ಯಾಂಕಿನ ಅಧಿಕಾರಿಗಳು ಸರ್ಕಾರಿ ಕೆಲಸಕ್ಕೆ ಧಕ್ಕೆ ತರುತ್ತೇನೆ ಎಂದು ನನಗೆ ಬೆದರಿಕೆ ಹಾಕಿ ರುತ್ತಾರೆ ಅಂತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಿಪಿ 1 2013 ರಲ್ಲಿ ಟೈಯರ್ ಖರೀದಿ ಸಮಯದಲ್ಲಿ ನೀಡಿದ ಚೆಕ್ಕು ಅಂದರೆ ಸರಿಯಲ್ಲ . ನಿಪಿ 1 ಅನ್ನು 15-7-2013 ರಂದು ನೀಡಿದ್ದು ನಾನು ಅದನ್ನು 15-07-2018 ಅಂತ ತಿದ್ದಿರುತ್ತೀನಿ ಅಂದರೆ ಸರಿಯಲ್ಲ . ನಿಪಿ 1 ರಲ್ಲಿರುವ ಇಸವಿ ತಿದ್ದಿರುವುದಾಗಿ ಕಂಡು ಬರುತ್ತದೆ ಅಂದರೆ ಸರಿಯಲ್ಲ .

CC 2607-2019

**PW-2**

ಆರೋಪಿ ನನ್ನ ಹತ್ತಿರ ಹಣ ಕಾಸಿನ ಸಹಾಯ ಕೇಳಿಲ್ಲ  ಸುಮಾರು ವರ್ಷಗಳ ಹಿಂದೆ ಟೈರ್ ಖರೀದಿಗಾಗಿ ನೀಡಿದ ಚೆಕ್ಕು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

ಮರು ವಿಚಾರಣೆ ಃ  ಇಲ್ಲಾ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರ.ದ.ನ್ಯಾದಂ.ಗಳು, ಹೊಸಪೇಟೆ.